REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 | ಸಂಚಿಕೆ : 13 | ಜುಲೈ 5, 2023 | ಬುಧವಾರ | ಪುಟಗಳು : 8 | ಬೆಲೆ : 2/-

## ಬೆಳಗಾವಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಜರುಗಿದ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರ



**ತುಮಕೂರು** : ದಿನಾಂಕ : 27.06.2023 ರಂದು ಬೆಳಗಾವಿಯ "ಆದರ್ಶ ಪ್ಯಾಲೇಸ್ ಹೋಟೆಲ್"ನಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ರಾಜ್ಯಮಟ್ಟದ ತರಬೇತಿ ಶಿಬಿರವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಬಸವರಾಜ ಈಶ್ವರಪ್ಪ ಕಲ್ಯಾಣಶೆಟ್ಟಿ ರವರು ಉದ್ಘಾಟಿಸಿದರು.

ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಎಂ.ಎಂ. ಮೆಟಗುಡ್ಡ ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ನಮ್ಮ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ & ಹಿರಿಯ ಅಧಿಕಾರಿಗಳಿಗೆ ಜ್ಞಾನಮಟ್ಟವನ್ನು ಹೆಚ್ಚಿಸಲಿಕ್ಕೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ತರಬೇತಿ ವಿಚಾರ ಸಂಕಿರಣ ಕಾರ್ಯಾಗಾರಗಳು, ಹಾಗೆಯೇ ಎಲ್ಲರ ಬುದ್ದಿಮತ್ತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ನಮ್ಮ ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್. ಕೆ. ಪಾಟೀಲರ ನಿರ್ದೇಶನದ ಅನ್ವಯ ನಮ್ಮ ಮಹಾಮಂಡಳ ಆಯೋಜಿಸುತ್ತಾ ಬಂದಿದೆ. ಇವತ್ತು ಬೆಳಗಾವಿಯಲ್ಲಿ ಈ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಒಂದು ಮೈಲುಗಲ್ಲಾಗಬೇಕೆಂದು ಆಶಿಸುತ್ತೇನೆ. ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ವಿಚಾರ ಸಂಕಿರಣಗಳು ಅನುಕೂಲವಾಗುತ್ತವೆ.

3ನೇ ಪುಟಕ್ಕೆ...



2 ರೂ. 2 ಲಕ್ಷ ಕೋಟಿ ದಾಟಿದ ಕ್ರೆಡಿಟ್ ಕಾರ್ಡ್ ಸಾಲದ ಬಾಕಿ ಒಂದೇ ವರ್ಷದಲ್ಲಿ ಶೇ.30ರಷ್ಟು ಹೆಚ್ಚಳ

4 ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ : ಹೊಸ ಶಾಖೆಗಳ ಉದ್ಘಾಟನೆ

7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



### ಆರ್ಥಿಕ ದುರ್ಬಲ ವರ್ಗಗಳ ನೆರವಿಗೆ ನಿಲ್ಲಬೇಕಾದ್ದು ಯಾವುದೇ ಮಾತ್ರ ಹೃದಯವುಳ್ಳ ಸರ್ಕಾರವೊಂದರ ಕರ್ತವ್ಯ ಹಾಗೂ ಜವಾಬ್ದಾರಿ

ಇದೆ ಜುಲೈ 7ರಂದು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಬಜೆಟ್ ಮಂಡಿಸಲಿದ್ದಾರೆ. ಅವರು ಅಂದಾಜಿಸಿರುವಂತೆ, ಈ ಬಾರಿ ಬಜೆಟ್ ಗಾತ್ರ ರೂ.3.35 ಲಕ್ಷ ಕೋಟಿಗೆ ಏರಿಕೆಯಾಗುವ ಸಾಧ್ಯತೆ ಇದೆ. ಬಜೆಟ್ ಗಾತ್ರ ಹೆಚ್ಚಳವಾಗಲಿರುವುದಕ್ಕೆ ಮುಖ್ಯ ಕಾರಣ; ಕಳೆದ ಚುನಾವಣಾ ಪೂರ್ವದಲ್ಲಿ ರಾಜ್ಯದ ಆರ್ಥಿಕ ದುರ್ಬಲ ವರ್ಗದವರಿಗೆ ನೀಡುವುದಾಗಿ ಘೋಷಿಸಿರುವ ಗ್ಯಾರಂಟಿಗಳಾಗಿವೆ. ಇವುಗಳ ಜಾರಿಗೆ ಸುಮಾರು ರೂ.60 ಸಾವಿರ ಕೋಟಿಯಷ್ಟು ಸಂಪನ್ಮೂಲ ಕ್ರೂಡಿಕರಿಸಬೇಕಾಗಿದೆ.

ಮುಖ್ಯವಾಗಿ ಬಡ ವರ್ಗಗಳಿಗೆ ಹೀಗೆ ಸವಲತ್ತುಗಳನ್ನು ನೀಡುವುದನ್ನು ಉಳ್ಳವರು ವಿರೋಧಿಸುತ್ತಿದ್ದಾರೆ. ಸರ್ಕಾರ ತಾವು ತೆರುವ ತೆರಿಗೆಯನ್ನು ಈ ಜನಗಳಿಗೆ ಪುಕ್ಕಟ್ಟೆ ಸವಲತ್ತು ನೀಡಲು ಬಳಸುತ್ತಿದೆ ಎಂದು ಕಿಡಿ ಕಾರುತ್ತಿದ್ದಾರೆ. ಆದರೆ, ಈ ಜನಗಳು ಅರಿಯಬೇಕಾದ್ದು, ದೇಶದ ಉದ್ಯಮಿಗಳು, ಕಾರ್ಪೋರೇಟ್ ವರ್ಗಗಳು, ಸಿರಿವಂತರು ತೆರುವ ಒಟ್ಟು ತೆರಿಗೆ ಪ್ರಮಾಣ ಶೇ.32ರಷ್ಟಿದೆ. ಉಳಿದ ಶೇ. 68ರಷ್ಟು ತೆರಿಗೆ ಹಣ ಸಂಗ್ರಹವಾಗುವುದು ಅಸಂಘಟಿತ ವಲಯದಲ್ಲಿ ದುಡಿಯುವ ಬಹುಸಂಖ್ಯಾತ ಕಾರ್ಮಿಕರು, ಶ್ರಮ ಜೀವಿಗಳು, ಕೃಷಿಕರು, ನೇಕಾರಕರು ಹಾಗೂ ವಿವಿಧ ಸೇವಾ ವೃತ್ತಿನಿರತರು ತೆರುವ ಹಣವಾಗಿದೆ. ಇವರುಗಳು ತೆರುವ ಅಲ್ಪ ತೆರಿಗೆಗಳೇ, ಹರಿಯುವ ಸಣ್ಣ ತೊರೆಗಳ ಹಾಗೆ ಸೇರಿ ಬೃಹತ್ತಾಗಿ, ಸರ್ಕಾರದ ಬೊಕ್ಕಸಕ್ಕೆ ಬಂದು ಸೇರುತ್ತದೆ.

ಟೀಕೆಗಳು ಏನೇ ಇರಲಿ, ಆರ್ಥಿಕ ದುರ್ಬಲ ವರ್ಗಗಳ ನೆರವಿಗೆ ನಿಲ್ಲಬೇಕಾದ್ದು ಯಾವುದೇ ಮಾತ್ರ ಹೃದಯವುಳ ಸರ್ಕಾರವೊಂದರ ಕರ್ತವ್ಯ ಹಾಗೂ ಜವಾಬ್ದಾರಿ ಎಂದು ನಾನು ಹೇಳ ಬಯಸುತ್ತೇನೆ. ದೇಶದ ಜನಸಂಖ್ಯೆಯ ಒಂದರಷ್ಟು ಇರುವ ಶ್ರೀಮಂತರ ಬಳಿ ದೇಶದ ಒಟ್ಟು ಸಂಪತ್ತಿನ ಅರ್ಧಕಿಂತ ಹೆಚ್ಚು ಸಂಪತ್ತು ಕೊಳೆಯುತ್ತಿದೆ. ಅದೇ ಸಮಯದಲ್ಲಿ ದೇಶದ ಬಹು ಸಂಖ್ಯಾತ ಜನರ ಬಳಿ ಇರುವ ಸಂಪತ್ತು ಕೇವಲ ಮೂರರಷ್ಟು ಮಾತ್ರ.

ಹೀಗೆ ದೇಶದಲ್ಲಿ ಶತಕೋಟ್ಯಾಧಿಪತಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದ್ದರೆ, ಇದಕ್ಕೆ ತದ್ವಿರುದ್ಧವಾಗಿ ಬಹು ಸಂಖ್ಯಾತ ಜನ ಬಡತನದತ್ತ ಜಾರುತ್ತಿದ್ದಾರೆ. ನಮ್ಮ ತೆರಿಗೆ ನೀತಿ ಜನಪರವಾಗಿಲ್ಲದಿದ್ದರೆ, ಈ ಕಂದಕ ಇನ್ನೂ ಹೆಚ್ಚಾಗುವ ಆತಂಕವಿದೆ. ಎಂಥ ವಿಪರ್ಯಾಸ, ಕೇಂದ್ರ ಸರ್ಕಾರ ಶ್ರೀಮಂತರಿಗೆ ಅವರು ತೆರಬೇಕಾದ ತೆರಿಗೆಗಳಿಗೆ ಅಪಾರ ರಿಯಾಯಿತಿಗಳನ್ನು ನೀಡುತ್ತದೆ ಹಾಗೂ ಅವರುಗಳು ಬ್ಯಾಂಕುಗಳಿಗೆ ಕಟ್ಟಬೇಕಾದ ಕೋಟ್ಯಾಂತರ ರೂಗಳ ಬ್ಯಾಂಕ್ ಸಾಲಗಳನ್ನು ಮನ್ನಾ ಮಾಡುತ್ತದೆ. ಆದರೆ, ಬಡ ಜನ ಬಳಸುವ ಎಲ್ಲಾ ಅಗತ್ಯ ವಸ್ತುಗಳ ಮೇಲೂ ವಿಪರೀತ ಪ್ರಮಾಣದ ತೆರಿಗೆ ವಿಧಿಸುತ್ತದೆ. ಇದು ತಪ್ಪಬೇಕು ಬದಲಿಗೆ, ಸಿರಿವಂತರುಗಳ ಮೇಲೆ ಅಲ್ಪ ಪ್ರಮಾಣದ ಐಷಾರಾಮಿ (ಲಕ್ಷುರಿ) ತೆರಿಗೆ ವಿಧಿಸಿದರೂ, ಬರುವ ಆದಾಯದಿಂದ ಅಗತ್ಯ ವಸ್ತುಗಳ ಮೇಲಿನ ಸರಕು ಮತ್ತು ಸೇವಾ ತೆರಿಗೆ ದರಗಳನ್ನು ಬಹುತೇಕ ಇಳಿಸಿ ಜನಪರ ಕಲ್ಯಾಣ ಯೋಜನೆಗಳನ್ನು ರೂಪಿಸಬೇಕು. ಈಗ ವಿಚಾರ ಮಾಡಿ, ಅಗತ್ಯವುಳ್ಳವರಿಗೆ ಕೆಲ ಗ್ಯಾರಂಟಿ ನೀಡುವುದು ಸರಿಯೇ, ತಪ್ಪೇ?

▸▸ ಎಚ್.ಕೆ. ಪಾಟೀಲ್

## ರೂ. 2 ಲಕ್ಷ ಕೋಟಿ ದಾಟಿದ ಕ್ರೆಡಿಟ್ ಕಾರ್ಡ್ ಸಾಲದ ಬಾಕಿ ಒಂದೇ ವರ್ಷದಲ್ಲಿ ಶೇ.30ರಷ್ಟು ಹೆಚ್ಚಳ




**ಮುಂಬೈ :** ಕೇವಲ ಒಂದೇ ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಸಾಲದ ಬಾಕಿ ಮೊತ್ತ ಒಟ್ಟಾರೆ ಬ್ಯಾಂಕ್ ಸಾಲದ ಎರಡು ಪಟ್ಟು ಹೆಚ್ಚಾಗಿದೆ. ಇದೇ ಮೊದಲ ಬಾರಿಗೆ, ಏಪ್ರಿಲ್ ತಿಂಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲದ ಬಾಕಿಯು 2 ಲಕ್ಷ ಕೋಟಿ ರೂ. ದಾಟಿದೆ ಎಂದು ಆರ್‌ಬಿಐ ಹೇಳಿದೆ.

ಅಸುರಕ್ಷಿತ ಸಾಲದ ಪ್ರಮಾಣ ಹೆಚ್ಚಳದ ಕುರಿತು ಆರ್‌ಬಿಐ ಕಳವಳ ವ್ಯಕ್ತಪಡಿಸಿರುವ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಆರ್‌ಬಿಐ ಮಾಹಿತಿ ಪ್ರಕಾರ, ಕ್ರೆಡಿಟ್ ಕಾರ್ಡ್ ಮೂಲಕ ಸಾಲ ಪಡೆದರೂ ಮರುಪಾವತಿ ಮಾಡದೇ ಉಳಿಸಿರುವ ಬಾಕಿ ಮೊತ್ತ ಪ್ರಸಕ್ತ ವರ್ಷದ ಏಪ್ರಿಲ್ ವೇಳೆಗೆ 2,00,258 ಕೋಟಿ ರೂ. ಆಗಿದೆ. ಅಂದರೆ 2022ರ ಏಪ್ರಿಲ್‌ಗೆ ಹೋಲಿಸಿದರೆ ಶೇ.29.7ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ, ಬ್ಯಾಂಕುಗಳು ನೀಡುವ ಸಾಮಾನ್ಯ ಸಾಲದ ಬಾಕಿ ಮೊತ್ತ 138.6 ಲಕ್ಷ ಕೋಟಿ ರೂ. ಆಗಿತ್ತು. ಅಂದರೆ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇ.16ರಷ್ಟು ಏರಿಕೆ ಕಂಡಿದೆ.

ಕ್ರೆಡಿಟ್ ಕಾರ್ಡ್ ಸಾಲದ ಹೆಚ್ಚಳವಾಗಲು ಸಾಲ ಮಾಡುವವವರ ಸಂಖ್ಯೆ ಏರಿಕೆಯಾಗಿರುವುದು ಮಾತ್ರ ಕಾರಣವಲ್ಲ, ಹಣದುಬ್ಬರ ಮತ್ತು ಪಾವತಿಗಾಗಿ ಹೆಚ್ಚು ಮೊತ್ತ ಬಳಕೆಯಾಗುತ್ತಿರುವುದು ಕಾರಣ ಎಂದು ವಿಶ್ಲೇಷಿಸಲಾಗಿದೆ.

**ಶೇ.5ಕ್ಕಿಂತಲೂ ಕಡಿಮೆ :** ಏಪ್ರಿಲ್‌ನಲ್ಲಿ ಒಟ್ಟಾರೆ 1.3 ಲಕ್ಷ ಕೋಟಿ ರೂ. ಮೊತ್ತಗಳಿಗಾಗಿ ಕ್ರೆಡಿಟ್ ಕಾರ್ಡ್ ಸಾಲಗಳನ್ನು ಪಾವತಿಮಾಡಲಾಗಿದೆ ಅಥವಾ ಆನ್‌ಲೈನ್‌ನಲ್ಲಿ ಬಳಸಲಾಗಿದೆ. ಇನ್ನು, ಭಾರತದ ಮಟ್ಟಿಗೆ ನೋಡುವುದಾದರೆ ದೇಶದಲ್ಲಿ ಕ್ರೆಡಿಟ್ ಕಾರ್ಡ್ ಸಾಲದ ಬಳಕೆದಾರರ ಪ್ರಮಾಣ ಶೇ.5 ಕ್ಕಿಂತಲೂ ಕಡಿಮೆ. ಅಭಿವೃದ್ಧಿ ಹೊಂದುತ್ತಿರುವ ಅನೇಕ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದಲ್ಲೇ ಕ್ರೆಡಿಟ್ ಕಾರ್ಡ್ ಸಾಲದ ಬಳಕೆದಾರರು ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

...1ನೇ ಪುಟದಿಂದ

**ಈ ತರಬೇತಿ ಶಿಬಿರದಲ್ಲಿ Recent RBI Guidelines :**

1. Framework for Compromise Settlements and Technical write-off 2. Rationalization of Branch authorization Policy for UCBs 3. Priority Sector Lending Targets / Sub -Targets ಕುರಿತು ಆರ್‌ಬಿಐನ ನಿವೃತ್ತ ಸಹಾಯಕ ವ್ಯವಸ್ಥಾಪಕರು ಹಾಗೂ ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, 1. Recovery Management / Prudential as Applicable to UCBs (IRAC Norms / CRAR 2. Digital Banking and Technology Implementation ಕುರಿತು ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಎಸ್.ಜಿ. ಕುಲಕರ್ಣಿರವರು, Investment Management ಕುರಿತು ಎಸ್‌ಟಿಸಿಐ ಪ್ರೈಮರಿ ಡೀಲರ್ ಲಿ., ಸಹಾಯಕ ವೈಸ್ ಪ್ರೆಸಿಡೆಂಟ್ ಶ್ರೀ ತಿಪ್ಪೇಶ ಅಂಗಡಿ ರವರುಗಳು ಉಪನ್ಯಾಸ ನೀಡಿದರು.

ಈ ತರಬೇತಿ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಹಾಮಂಡಳದ ಮಾಜಿ ನಿರ್ದೇಶಕರಾದ ಶ್ರೀ ವಿಜಯಕುಮಾರ ಸಿ. ಅಂಗಡಿ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಈ ತರಬೇತಿ ಶಿಬಿರಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಈ ತರಬೇತಿ ಶಿಬಿರದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ತರಬೇತಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.

## 9ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ ಲಿಖಿತ ಪರೀಕ್ಷೆಗಳು ದಿನಾಂಕ : 24, 25ನೇ ಜೂನ್ 2023 ಮತ್ತು 02 ಜುಲೈ 2023ರಂದು ಜರುಗಿದವು




**ಬೆಂಗಳೂರು :** ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ 9ನೇ ಬ್ಯಾಚ್‌ನ ಆರು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 24, 25ನೇ ಜೂನ್ 2023 ಮತ್ತು 02 ಜುಲೈ 2023ರಂದು ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯಲ್ಲಿ ಜರುಗಿದವು.




**ಬಾಗಲಕೋಟೆ :** ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್ (ಡಿಯುಸಿಬಿಎಂ)ನ 9ನೇ ಬ್ಯಾಚ್‌ನ ಆರು ವಿಷಯಗಳ ಲಿಖಿತ ಪರೀಕ್ಷೆಗಳು ದಿನಾಂಕ : 24, 25ನೇ ಜೂನ್ 2023 ಮತ್ತು 02 ಜುಲೈ 2023 ರಂದು ಬಾಗಲಕೋಟೆಯಲ್ಲಿ ಜರುಗಿದವು.

# ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕ್ : ಹೊಸ ಶಾಖೆಗಳ ಉದ್ಘಾಟನೆ



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 20ನೇ ಶಾಖೆಯನ್ನು "ಯರಗಟ್ಟಿ"ಯಲ್ಲಿ ದಿನಾಂಕ : 12.06.2023ರಂದು ಮ.ನಿ.ಪ್ರ. ಕುಮಾರೇಶ್ವರ ವಿರಕ್ತಮಠ, ಕಟಕೋಳ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 21ನೇ ಶಾಖೆಯನ್ನು "ಕಿತ್ತೂರ"ನಲ್ಲಿ ದಿನಾಂಕ : 12.06.2023 ರಂದು ಶ್ರೀ ಮಡಿವಾಳ ರಾಜಯೋಗೀಂದ್ರ ಸ್ವಾಮಿಗಳು ರಾಜಗುರು ಸಂಸ್ಥಾನ ಕಲ್ಮಠ, ಚನ್ನಮ್ಮನ ಕಿತ್ತೂರ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 22ನೇ ಶಾಖೆಯನ್ನು "ಸವದತ್ತಿ"ಯಲ್ಲಿ ದಿನಾಂಕ : 12.06.2023 ರಂದು ಶ್ರೀ ಮ.ಘ.ಚ. ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು ಮೂಲಿಮಠ, ಸವದತ್ತಿ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.



ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರ ಬ್ಯಾಂಕಿನ 23ನೇ ಶಾಖೆಯನ್ನು "ಮುರಗೋಡ"ದಲ್ಲಿ ದಿನಾಂಕ : 12.06.2023 ರಂದು ಶ್ರೀ ಮ.ನಿ.ಪ್ರ.ಸ್ವ ನೀಲಕಂಠ ಮಹಾಸ್ವಾಮಿಗಳು, ಶ್ರೀ ಮಹಾಂತ ದುರದುಂಡೇಶ್ವರ ಮಠ, ಮುರಗೋಡ ಇವರ ಅಮೃತ ಹಸ್ತದಿಂದ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಗಣ್ಯರು, ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.

## ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿಗೆ ಉತ್ತಮ ಪಟ್ಟಣ ಸಹಕಾರ ಬ್ಯಾಂಕ್ ರಾಷ್ಟ್ರೀಯ ಗೌರವ

ದಿನಾಂಕ : 14-06-2023ರಂದು All India Urban Co Operative Bank Summit-2023 ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್‌ಗೆ Best Urban Co Operative Bank ಮತ್ತು Best NPA Management ವಿಭಾಗದಲ್ಲಿ ಪ್ರಶಸ್ತಿ ಲಭಿಸಿದೆ.



## ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : ಜಮಖಂಡಿಯ ನೂತನ ಮಹಿಳಾ ಶಾಖೆ ಮತ್ತು ತೊದಲಬಾಗಿ ಶಾಖೆಗಳ ಉದ್ಘಾಟನೆ



ದಿನಾಂಕ : 17.06.2023ರಂದು ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಜಮಖಂಡಿಯ ನೂತನ ಮಹಿಳಾ ಶಾಖೆಯ ಉದ್ಘಾಟನೆಯನ್ನು ಭಾರತೀಯ ರಿಜರ್ವ್ ಬ್ಯಾಂಕಿನ ಪಟ್ಟಣ ಬ್ಯಾಂಕುಗಳ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ಗಡ ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಉಪಸ್ಥಿತರಿದ್ದರು.



ದಿನಾಂಕ : 17.06.2023ರಂದು ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ತೊದಲಬಾಗಿ ನೂತನ ಶಾಖೆಯ ಉದ್ಘಾಟನೆಯನ್ನು ನಾಡೋಜ ಜಗದೀಶ ಗುಡಗುಂಟಿ ರವರು ಉದ್ಘಾಟಿಸಿದರು. ಈ ಸಮಾರಂಭದ ದಿವ್ಯಸಾನಿಧ್ಯವನ್ನು ಪರಮಪೂಜ್ಯ ಶ್ರೀ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಮುತ್ತಿನಕಂತಿಮಠ, ಜಮಖಂಡಿ ಇವರು ವಹಿಸಿದ್ದರು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಬ್ಯಾಂಕುಗಳಿಗೆ ಜಮೆಯಾದ ನಕಲಿ ನೋಟು : ಕರ್ನಾಟಕದ ವಿವಿಧ ಬ್ಯಾಂಕ್ ಮ್ಯಾನೇಜರ್‌ಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ ಆರ್‌ಬಿಐ

**ಬೆಂಗಳೂರು** : ಬ್ಯಾಂಕುಗಳಿಗೆ ಜಮೆಯಾದ ಹಣದಲ್ಲಿ ನಕಲಿ ನೋಟುಗಳನ್ನು ಪತ್ತೆಹಚ್ಚಿದ ನಂತರ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ರಿಸರ್ವ್ ಬ್ಯಾಂಕ್ ಎಫ್‌ಐಆರ್ ದಾಖಲಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.




100 ಮುಖಬೆಲೆಯ 30 ನಕಲಿ ನೋಟುಗಳು ಪತ್ತೆಯಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ನಾಲ್ಕು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಡುಪಿ, ಮಣಿಪಾಲ, ಹುಬ್ಬಳ್ಳಿ ಬ್ಯಾಂಕ್ ಶಾಖೆಗಳು ಮತ್ತು ಬೆಂಗಳೂರಿನ ಮಲ್ಲೇಶ್ವರಂ ಶಾಖೆಯಲ್ಲಿ ನಕಲಿ ನೋಟುಗಳು ಪತ್ತೆಯಾಗಿದ್ದು, ಈ ಬ್ಯಾಂಕ್‌ಗಳು ಆರ್‌ಬಿಐಗೆ ರವಾನೆ ಮಾಡಿದ ಹಣದಲ್ಲಿ ನಕಲಿ ಕರೆನ್ಸಿ ನೋಟುಗಳು ಪತ್ತೆಯಾಗಿವೆ.

ಈ ಸಂಬಂಧ ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್, ಯುಬಿಐ ಬ್ಯಾಂಕ್ ಮ್ಯಾನೇಜರ್‌ಗಳ ವಿರುದ್ಧ ಆರ್‌ಬಿಐ ಮ್ಯಾನೇಜರ್ ಆನಂದ್ ದೂರು ದಾಖಲಿಸಿದ್ದರು. ವಿಚಾರಣೆಗೆ ಹಾಜರಾಗುವಂತೆ ಬ್ಯಾಂಕ್‌ಗಳ ವ್ಯವಸ್ಥಾಪಕರಿಗೆ ನೋಟಿಸ್ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

## ಭಾವಪೂರ್ಣ ಶ್ರದ್ಧಾಂಜಲಿ



**ಹುಬ್ಬಳ್ಳಿ** : ಮಹಾಮಂಡಳದ ಹುಬ್ಬಳ್ಳಿ ಪ್ರಾಂತೀಯ ಕಛೇರಿಯಲ್ಲಿ ಕಿರಿಯ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶೆಟ್ಟಪ್ಪ ದುರಗಪ್ಪ ಸೊರಟೂರ (47) ದಿನಾಂಕ : 30.06.2023ರಂದು ಹೃದಯಾಘಾತದಿಂದ ನಿಧನರಾದರು. ಶೆಟ್ಟಪ್ಪ ದುರಗಪ್ಪ ಸೊರಟೂರ ಇವರ ನಿಧನಕ್ಕೆ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಆಡಳಿತ ಮಂಡಳಿ ಸದಸ್ಯರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ, ಸಿಬ್ಬಂದಿ ವರ್ಗದವರು ತೀವ್ರ ಸಂತಾಪ ವ್ಯಕ್ತಪಡಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

# ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ : ಐಎಂಪಿಎಸ್ ಸೌಲಭ್ಯ




**ಸಾಗರ :** ಶ್ರೀ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ ದೇವೇಂದ್ರರವರು ದಿನಾಂಕ : 30.06.2023 ರಂದು ಗ್ರಾಹಕರ ಅನುಕೂಲಕ್ಕಾಗಿ ಬ್ಯಾಂಕಿನಲ್ಲಿ ಐಎಂಪಿಎಸ್ ಸೌಲಭ್ಯವನ್ನು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷರು ಇತರೆ ಬ್ಯಾಂಕುಗಳಿಂದ ನಮ್ಮ ಬ್ಯಾಂಕಿಗೆ ಹಾಗೂ ನಮ್ಮ ಬ್ಯಾಂಕಿನಿಂದ ಇತರೆ ಬ್ಯಾಂಕುಗಳಿಗೆ ಹಣವನ್ನು ತ್ವರಿತಗತಿಯಲ್ಲಿ ಜಮಾಮಾಡಲು ಸಾಧ್ಯವಾಗುತ್ತದೆ ಇದರಿಂದ ಗ್ರಾಹಕರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಈ ಸೌಲಭ್ಯವನ್ನು ಗ್ರಾಹಕರು ಸದುಪಯೋಗ ಪಡಿಸಿಕೊಂಡು ಇನ್ನೂ ಹೆಚ್ಚಿನ ರೀತಿಯಲ್ಲಿ ವ್ಯವಹಾರ ನಡೆಸಬೇಕೆಂದು ಕೋರಿದರು, ಬ್ಯಾಂಕಿನ ಆಡಳಿತ ಮಂಡಳಿಯು ಇನ್ನೂ ಹೆಚ್ಚಿನ ರೀತಿಯಲ್ಲಿ ತಂತ್ರಾಂಶಾದಾರಿತ ಸೇವೆಗಳನ್ನು ಗ್ರಾಹಕರಿಗೆ ನೀಡಲು ಶ್ರಮಿಸುತಿದ್ದು ಮುಂದಿನ ದಿನಗಳಲ್ಲಿ ಯುಪಿಐ ಸೌಲಭ್ಯವನ್ನೂ ಸಹ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಬ್ಯಾಂಕಿನ ಎಲ್ಲಾ ನಿರ್ದೇಶಕ ಮಂಡಳಿ ಸದಸ್ಯರನ್ನು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಲಲಿತಾಂಬಿಕೆ ಬಿ ರವರನ್ನು ಚಿತ್ರದಲ್ಲಿ ಕಾಣಬಹುದಾಗಿರುತ್ತದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿಯ ದಿನಾಂಕವನ್ನು ಮುಂದೂಡಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ.)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme)ಯನ್ನು ಪ್ರಾರಂಭಿಸಲಾಗಿದೆ.

ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ 6ನೇ ಬ್ಯಾಚ್ ತರಬೇತಿಯನ್ನು ದಿನಾಂಕ : 03.07.2023 ರಂದು ಬೆಳಿಗ್ಗೆ 09.00 ಗಂಟೆಯಿಂದ ದಿನಾಂಕ : 07.07.2023ರ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು-560070 ಇಲ್ಲಿ ಏರ್ಪಡಿಸಲಾಗಿತ್ತು.

ಆದರೆ ಅನಿವಾರ್ಯ ಕಾರಣಗಳಿಂದ ದಿನಾಂಕ : 03.07.2023 ರಿಂದ ದಿನಾಂಕ : 07.07.2023ರವರೆಗೆ ಜರುಗಬೇಕಾಗಿದ್ದ ಸದರಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ : 31.07.2023 ರಿಂದ 04.08.2023ಕ್ಕೆ ಮುಂದೂಡಲಾಗಿದೆ ಎಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ತಿಳಿಸಿರುತ್ತಾರೆ.

# ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭ





**ಬೆಂಗಳೂರು** : ಶ್ರೀ ಲಕ್ಷ್ಮೀನಾರಾಯಣ ಕೋ–ಆಪರೇಟಿವ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಮಾರಂಭ ದಿನಾಂಕ : 25.06.2023 ರಂದು ಅದ್ದೂರಿಯಾಗಿ ನೆರವೇರಿತು.

ಕಾರ್ಯಕ್ರಮಕ್ಕೆ ಪರಮಪೂಜ್ಯ ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಪರಮಪೂಜ್ಯ ಶ್ರೀಶ್ರೀಶ್ರೀ ನಂಜಾವಧೂತ ಸ್ವಾಮೀಜಿ, ಶ್ರೀ ಸ್ಪಟಿಕಪುರಿ ಮಹಾಸಂಸ್ಥಾನ ಮಠ ಹಾಗು ಮಾನ್ಯ ಮಾಜಿ ಮಂತ್ರಿಗಳು ಹಾಲಿ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಶಾಸಕರು ಆದ ಡಾ ॥ ಸಿ.ಎನ್. ಅಶ್ವಥನಾರಾಯಣ್‌ರವರು ಭಾಗವಹಿಸಿ ಬ್ಯಾಂಕಿನ ಹೊಸ ಚಿಹ್ನೆ, ಹೊಸ ಸೇವೆಗಳನ್ನು ಅನಾವರಣ ಮಾಡಿದರು. ಸುವರ್ಣ ಮಹೋತ್ಸವದ ಅಂಗವಾಗಿ "ಸುವರ್ಣ ಸಂಪದ" ಸ್ಮರಣೆ ಸಂಚಿಕೆ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಒಬ್ಬ ಠೇವುದಾರರು ಠೇವಣಿ ಇರಿಸಿದ್ದು, ಅವರಿಗೆ ಒಟ್ಟು 4 ಜನ ಮಕ್ಕಳಿದ್ದು, ಈ ಪೈಕಿ ಸದರ ಠೇವಿಗೆ ಅವರ ಒಬ್ಬ ಮಗನನ್ನು ನಾಮಿನಿ ಅಂತಾ ನಮೂದ ಮಾಡಿದ್ದರು. ಈಗ ಸದರ ಠೇವುದಾರರು ಮರಣ ಹೊಂದಿರುತ್ತಾರೆ. ನಾಮಿನಿ ಹೋಲ್ಡರ ಠೇವು ರಕಂ ಪರತ ಪಡೆಯುವ ಮೊದಲು ಮತ್ತೊಬ್ಬ ಮಗ ಸದರ ಠೇವಣಿ ಹಣವನ್ನು ನಾಮಿನಿ ಹೋಲ್ಡರ್‌ಗೆ ನೀಡಬಾರದು; ಇದಕ್ಕೆ ತನ್ನ ತಕರಾರು ಇದೆ ಅಂತಾ ವಕೀಲರ ಕಡೆಯಿಂದ ಕಾನೂನು ರೀತ್ಯಾ ನೋಟೀಸು ಬ್ಯಾಂಕಿಗೆ ನೀಡಿರುತ್ತಾರೆ. ನಾಮಿನಿ ಹೋಲ್ಡರ್ ಠೇವಿನ ರಕಂ ತನಗೆ ಪರತ ನೀಡಿರಿ ಅಂತಾ ಬ್ಯಾಂಕಿಗೆ ಬಂದು ಕೇಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಬ್ಯಾಂಕು ಏನು ಕ್ರಮಕೈಗೊಳ್ಳಬೇಕು ಅನ್ನುವುದರ ಬಗ್ಗೆ ಸೂಕ್ತ ಸಲಹೆ ನೀಡಬೇಕಾಗಿ ತಮ್ಮಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.**

**– ದಿ ಹಾವೇರಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಹಾವೇರಿ.**

**ಉತ್ತರ :** ಠೇವಣಿದಾರನ ಮರಣದ ಸಂದರ್ಭದಲ್ಲಿ ನಾಮಿನಿಯು ಕಾನೂನು ಉತ್ತರಾಧಿಗಳ ಟ್ರಸ್ಟಿಯಾಗಿ ಖಾತೆಯಲ್ಲಿ ಬಾಕಿ ಉಳಿದಿರುವ ಮೊತ್ತವನ್ನು ಸ್ವೀಕರಿಸಲು ವಿಶೇಷ ಹಕ್ಕನ್ನು ಪಡೆಯುತ್ತಾನೆ. ನಾಮಿನಿ ಪಡೆದ ಹಣ ಮೃತ ಠೇವಣಿದಾರನ ಎಸ್ಟೇಟ್‌ನ ಭಾಗವಾಗಿರುತ್ತದೆ ಮತ್ತು ಉತ್ತರಾಧಿಕಾರದ ನಿಯಮದ ಪ್ರಕಾರ ಹಂಚಿಕೆಯಾಗುತ್ತದೆ. ಠೇವಣಿಯ ಮೊತ್ತವನ್ನು ನಾಮಿನಿಗೆ ನೀಡಿದಲ್ಲಿ ಬ್ಯಾಂಕು ತನ್ನ ಜವಾಬ್ದಾರಿಯಿಂದ ಮುಕ್ತವಾಗುತ್ತದೆ. ಮೃತ ಠೇವಣಿದಾರನ ಉತ್ತರಾಧಿಕಾರಿಗಳು ತಮ್ಮ ಹಕ್ಕನ್ನು ನಾಮಿನಿಯೊಂದಿಗೆ ಇತ್ಯರ್ಥಪಡಿಸಬೇಕು. ಮೃತ ಠೇವಣಿದಾರನ ಉತ್ತರಾಧಿಕಾರಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತಂದಲ್ಲಿ ಮಾತ್ರ ಬ್ಯಾಂಕು ನಾಮಿನಿಗೆ ಠೇವಣಿ ಮೊತ್ತವನ್ನು ತಕ್ಷಣ ನೀಡುವ ಅಗತ್ಯವಿಲ್ಲ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಚೀನಾದ 56 ವರ್ಷದ ಕೋಟ್ಯಾಧೀಶ ಲಿಯಾಂಗ್ ಶಿ ಅವರು ತಮ್ಮ ಕನಸಿನ ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷೆಯನ್ನು 27 ಬಾರಿ ಬರೆದಿದ್ದು, ಪ್ರತಿಸಲವೂ ಫೇಲಾಗಿ ಸುದ್ದಿ ಮಾಡಿದ್ದಾರೆ.
- ಮಧ್ಯ ಪ್ರದೇಶದ ಭೋಪಾಲ್ ನಲ್ಲಿರುವ ಕೆರ್ವಾದಲ್ಲಿನ ಫಾರ್ಮ್‌ನಲ್ಲಿ ಹಸುವೊಂದರ ಗುಂಪಿನ ಮೇಲೆ ದಾಳಿ ಮಾಡಿದ್ದ ಹುಲಿಯನ್ನು ಎಲ್ಲಾ ಹಸುಗಳು ಒಗ್ಗೂಡಿ ತಮ್ಮ ಕೊಂಬುಗಳಿಂದ ತಿವಿದು ಓಡಿಸಿರುವ ಅಪರೂಪದ ಘಟನೆ ನಡೆದಿದೆ.
- ಮೆಕ್ಸಿಕೋ ನಗರದ ಕೆಲವು ಭಾಗಗಳಲ್ಲಿ ತಾಪಮಾನವು 50 ಡಿಗ್ರಿ ಸೆಲ್ಸಿಯಸ್ ಶಾಖ ದಾಖಲಾಗಿದ್ದು ಹೀಟ್ ವೇವ್‌ನಿಂದಾಗಿ ಕಳೆದ ಎರಡು ವಾರಗಳಲ್ಲಿ ಕನಿಷ್ಠ 100 ಜನರು ಸಾವನ್ನಪ್ಪಿದ್ದಾರೆ ಎಂದು ಅಲ್ಲಿನ ಆರೋಗ್ಯ ಸಚಿವಾಲಯ ತಿಳಿಸಿದೆ.
- ಹೊಳಲ್ಕೆರೆಯಲ್ಲಿ 70 ವರ್ಷದ ಗಂಗಾಧರ ಶಾಸ್ತ್ರೀ ಎನ್ನುವವರು ಇತ್ತೀಚೆಗೆ ಮೃತಪಟ್ಟಿದ್ದರು. ಮದುವೆಯಾಗಿಲ್ಲದ ಅವರು ಶಾಸ್ತ್ರ, ಪೂಜೆ ಮಾಡಿಸುತ್ತಾ ಜೀವನ ನಡೆಸುತ್ತಿದ್ದ ಅವರ ಮನೆಯಲ್ಲಿ 30 ಲಕ್ಷಕ್ಕೂ ಅಧಿಕ ಹಣ ಸಿಕ್ಕಿದೆ ಮಾತ್ರವಲ್ಲ ಅವರ ಹೆಸರಿನಲ್ಲಿ 16 ಎಕರೆ ಜಮೀನಿದೆ.
- ಮುಂಬೈ ರ್‍ಯಾಪಿಡ್ ಆಕ್ಷನ್ ಫೋರ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಯೊಬ್ಬರಿಗೆ ಕಡಿಮೆ ಬೆಲೆಯಲ್ಲಿ ಕಾರು ಕೊಡಿಸುವುದಾಗಿ ನಂಬಿಸಿ ಸಂಪರ್ಕಿಸಿದ ವಂಚಕರು 6.7 ಲಕ್ಷ ರೂಪಾಯಿ ಹಣವನ್ನು ದೋಚಿ ಪರಾರಿಯಾಗಿದ್ದಾರೆ.
- ರಾಜಕೀಯದಲ್ಲಿ ಆಸಕ್ತರಿರುವ ಪದವೀಧರರಿಗೆ ತರಬೇತಿ ನೀಡುವ ಉದ್ದೇಶದಿಂದ ಸಂಸ್ಥೆಯೊಂದನ್ನು ಸ್ಥಾಪಿಸುವ ಚಿಂತನೆ ರಾಜ್ಯ ಸರ್ಕಾರದ ಮುಂದಿದ್ದು, ಒಂದು ವರ್ಷದ ಕೋರ್ಸ್ ಇದಾಗಿದ್ದು, ಆರು ತಿಂಗಳು ಪ್ರಾಕ್ಟಿಕಲ್ ತರಗತಿ, ಇನ್ನಾರು ತಿಂಗಳು ಇಂಟರ್‌ಶಿಪ್ ಇರುತ್ತದೆ ಎಂದು ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ಹೇಳಿದ್ದಾರೆ.

## ಓದುಗರ ಅನಿಸಿಕೆ...




**ನೆಮ್ಮದಿಗೆ ಆರೋಗ್ಯಕರ ಜೀವನ ಪದ್ಧತಿಯೇ ಸೂಕ್ತ :** ಇಂದಿನ ದಿನಮಾನದಲ್ಲಿ ಬಹುತೇಕ ಎಲ್ಲರೂ ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಿದ್ದಾರೆ. ಇದರಿಂದ ಮಾನಸಿಕವಾಗಿ, ದೈಹಿಕವಾಗಿ ಬಳಲುತ್ತಿದ್ದಾರೆ. ಮಾನಸಿಕ, ದೈಹಿಕ ಒತ್ತಡದಿಂದ ಪಾರಾಗಲು ಆರೋಗ್ಯಕರ ಜೀವನ ಪದ್ಧತಿಯೇ ಸೂಕ್ತ ಎನ್ನುವುದನ್ನು ಕಳೆದ ಸಂಚಿಕೆಯಲ್ಲಿ ಸರಳವಾಗಿ, ತಮ್ಮ ಅನುಭವದ ಹಿನ್ನೆಲೆಯಲ್ಲಿ ತಿಳಿಸಿಕೊಟ್ಟ ಶ್ರೀ ಎಚ್.ಕೆ. ಪಾಟೀಲರಿಗೆ ಧನ್ಯವಾದಗಳು.

**ವಿ.ಕೆ. ಕೃಷ್ಣಮೂರ್ತಿ, ಬೆಂಗಳೂರು**

**ಎಲ್–ನಿನೊ ಎಂಬ ಒಂದು ಕುಂಟು ನೆಪ :** ಹಣದುಬ್ಬರ ನಿಯಂತ್ರಿಸಲು ಹರ ಸಾಹಸ ಮಾಡುತ್ತಿರುವ ರಿಸರ್ವ್ ಬ್ಯಾಂಕಿನ ಗವರ್ನರ್ ಶಕ್ತಿಕಾಂತ ದಾಸ್, ಚಿಲ್ಲರೆ ಹಣದುಬ್ಬರ ದರವನ್ನು ಶೇ.4ಕ್ಕೆ ತಗ್ಗಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ, ನಿರೀಕ್ಷಿತ ಮುಂಗಾರುವಿಗೆ ಎಲ್–ನಿನೊ ಹಾನಿಯಿಂದಾಗಿ ಅದು ಸಾಧ್ಯವಾಗದಿರಬಹುದೆಂದೂ ಮುಂಚಿತವಾಗಿಯೇ ಹೇಳಿಬಿಟ್ಟಿದ್ದಾರೆ. ಈಗ ಅವರಿಗೆ ಎಲ್–ನಿನೊ ಎಂಬ ಒಂದು ಕುಂಟು ನೆಪ ದೊರೆಕಿದೆ!

**ಅರುಣ ಪಾಟೀಲ್, ವಿಜಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.